ರೂ. 22/-

ತರಂಗ

12ನೆಯ
ಹುಟ್ಟುಹಬ್ಬದ
ವಿಶೇಷಾಂಕ
1995





ಗಮನಾರ್ಹ ಅಂಶವೆಂದಲ್ಲಿ ಪ್ರೆಸ್ಟೀಜ್ ಪ್ರೀಮಿಯಮ್ ನಾನ್-ಸ್ಟಿಕ್ ಕುಕ್‌ವೇರ್ ಸಂಗಡ, ಕಪ್ಪು ಸಹ ಕಂಗೊಳಿಸುತ್ತದೆ.

ನೀವು ಅಡುಗೆಮಾಡುವ ಭಾಗವೇ ಪ್ರೆಸ್ಟೀಜ್ ಪ್ರೀಮಿಯಮ್ ನಾನ್-ಸ್ಟಿಕ್ ಕುಕ್‌ವೇರ್‌ನ ಅತಿ ಮುಖ್ಯ ಭಾಗ. ಮತ್ತು ಇದಕ್ಕೆ ನಮ್ಮ ಡ್ಯೂಪೋಂ ಪ್ರಮಾಣೀಕೃತ ಟೆಫ್ಲಾನ್® 2 ನಾನ್-ಸ್ಟಿಕ್ ಲೇಪನವಿದೆ. ಇದು ಕಪ್ಪಾಗಿದೆ.


ಆದರೆ ಇದು ಸುಂದರವಾಗಿದೆ ಎಂದು ನೀವು ಭಾವಿಸಲು ಕಾರಣವೆಂದರೆ, ಇದರಿಂದಾಗಿ ನಿಮ್ಮ ಪಾತ್ರೆಗಳು ಮತ್ತು ಪ್ಯಾನ್‌ಗಳು ಬಾಳಿಕೆ ಬರುತ್ತವೆ. ತುಂಬಾ ಬಾಳಿಕೆ ಬರುತ್ತವೆ.

ಇದೇ ರೀತಿ ಹೊರಭಾಗದ ಮೇಲಿನ ಕೆಂಪು ಎಪಾಕ್ಸಿ ಪಾಲಿಯೆಸ್ಟರ್ ಪೌಡರಿನ ಲೇಪನ, ಬಿಸಿ ತಾಗದ ಫಿನೊಲಿಕ್ ಹ್ಯಾಂಡಲ್ ಮತ್ತು ಮಿಗಿಲಾಗಿ ನಾವು ಬಳಸುವ ಘನ ಅಲ್ಯೂಮಿನಿಯಂ ಸಹ ತುಂಬಾ ಬಾಳಿಕೆ ಹೊಂದಿವೆ.

ಇದಕ್ಕಾಗಿ ನೀವು 2 ವರ್ಷಗಳ ವಾರಂಟಿ ಪಡೆಯುತ್ತೀರಿ.

ನಿಸ್ಸಂದೇಹವಾಗಿ ಬಾಳಿಕೆ ಮಾತ್ರ ಪ್ರೆಸ್ಟೀಜ್ ಪ್ರೀಮಿಯಮ್ ನಾನ್-ಸ್ಟಿಕ್ ಕುಕ್‌ವೇರ್‌ನ ಏಕೈಕ ಗುಣವಲ್ಲ.

ನಮ್ಮ ತವೆಯ ಮೇಲಿನ ಥರ್ಮೋರೇ™ ಮತ್ತು ನಮ್ಮ ಸಾಸ್‌ಪ್ಯಾನ್‌ಗಳು, ಫ್ರೈಯಿಂಗ್ ಪ್ಯಾನ್‌ಗಳು ಮತ್ತು ಸಾಟೇ ಪ್ಯಾನ್‌ಗಳ (ಹುರಿಯುವ ಬಾಣಲಿ) ಮೇಲಿರುವ ಆರ್ಕಿಮಿಡೀಸ್ ಸುರುಳಿಯಿಂದಾಗಿ ಶಾಖ ಏಕಪ್ರಕಾರವಾಗಿ ಹರಡುವ ಖಾತರಿ ಇರುತ್ತದೆ. ನಿಮಗೆ ಅಡಿಗೆ ಮಾಡಲು ಚೆನ್ನಾಗಿರುವ ಮತ್ತು ಸಮಪಾಗಿ ಕಾವೇರಿದ ಮೇಲ್ಮೈ ಇರುತ್ತದೆ.



ಪ್ರೆಸ್ಟೀಜ್ ಪ್ರೀಮಿಯಮ್ ನಾನ್-ಸ್ಟಿಕ್ ಕುಕ್‌ವೇರ್ ಶ್ರೇಣಿಯಲ್ಲಿ 165 ರೂ. ಗಳಿಂದ 665 ರೂ. ಗಳವರೆಗಿನ ಬೆಲೆಗಳಲ್ಲಿನ 16 ನಮೂನೆಗಳು ಸಿಗುತ್ತವೆ.

ಹಾಗೂ ಇದು ಒಂದು ಚಮತ್ಕಾರದ ರೀತಿಯಲ್ಲಿ ಸ್ವಚ್ಛಗೊಳ್ಳುತ್ತದೆ. ಕೇವಲ ಒಂದು ಒದ್ದೆ ಸ್ಪಂಜ್ ಮತ್ತು ಸ್ವಲ್ಪ ಸಾಬೂನಿನಿಂದ.

ಈ ಎಲ್ಲಾ ಕಾರಣಗಳಿಂದಾಗಿ ನೀವು ನಿಮ್ಮ ಅಡಿಗೆಮನೆಯಲ್ಲಿ ಪ್ರೆಸ್ಟೀಜ್ ಪ್ರೀಮಿಯಮ್ ನಾನ್-ಸ್ಟಿಕ್ ಕುಕ್‌ವೇರ್ ಬಳಸುವಾಗ, ಇವುಗಳನ್ನು ವರ್ಣಿಸಲು ಏಕೈಕ ಪದ ಸಾಕೆಂದು ನೀವು ಭಾವಿಸುತ್ತೀರಿ. ಸುಂದರ.

Prestige
PREMIUM
NON-STICK COOKWARE

ತರಂಗ

ಹನ್ನೆರಡನೆಯ ಹುಟ್ಟುಹಬ್ಬದ ಸಂಚಿಕೆ 1995

ಪಲವುಂ ಪಳ್ಳ ಸಮುದ್ರವೈ

ಕನ್ನಡ ಲೋಕದ ನೆಚ್ಚಿನ ಸಾಪ್ತಾಹಿಕ, ನಿಮ್ಮ ಪ್ರೀತಿಯ 'ತರಂಗ' ಹನ್ನೆರಡು ಸಾರ್ಥಕ ವರ್ಷಗಳನ್ನು ಮುಗಿಸಿ, ಹದಿಮೂರಕ್ಕೆ ಅಡಿಯಿಡುವ ಸಂದರ್ಭದಲ್ಲಿ ಹುಟ್ಟುಹಬ್ಬದ ಈ ಸಂಚಿಕೆಯನ್ನು ನಿಮ್ಮ ಮುಂದಿಡಲು ಅತ್ಯಂತ ಸಂತೋಷವಾಗುತ್ತದೆ. ಅಭಿಮಾನವೆನಿಸುತ್ತದೆ.

'ತರಂಗ' ನಿಮ್ಮೆಲ್ಲರ ಕೂಸು. ನೀವು ಮುದ್ದಿನಿಂದ ಬೆಳೆಸಿದ ಮಗು. ಈಗ ಬಾಲ್ಯಾವಸ್ಥೆ ಕಳೆದು ಕಿಶೋರಾವಸ್ಥೆ ಆರಂಭ. ಇಂಗ್ಲಿಷಿನಲ್ಲಿ ಟೀನ್ ಏಜ್ (Teen Age) ಎನ್ನುತ್ತಾರಲ್ಲ ಹಾಗೆ.

'ತರಂಗ'ವು ಬೆಳೆದು ಬಂದ ಬಗೆ ವಿಶಿಷ್ಟವಾದುದು.

ಪ್ರಕೃತೋಚಿತ ವಾಕ್ಯಂಗಳ। ನಕುಟಿಲ ಭಾವಕ್ಕೆ ತಕ್ಕ ಸಂಪ್ರೀತಿಯುಮಂ।
ಪ್ರಕಟಿಸಬಲ್ಲವನೆ ಬುಧಂ। ಸ್ವಕೀಯ ಶಕ್ತಿಗೆ ಸಮಾನವಪ್ಪ ಕೋಪಮುಮಂ॥

ಎಂಬ ಹಿತೋಪದೇಶದ ಮಾತು ಈ ಬೆಳವಣಿಗೆಯ ಹಿಂದಿರುವ ಶಕ್ತಿ. (ಪ್ರಕೃತಕ್ಕೆ ಉಚಿತವಾದ ಮಾತುಗಳನ್ನೂ ನಿಷ್ಕಪಟ ಭಾವಕ್ಕೆ ತಕ್ಕ ಪ್ರೀತಿಯನ್ನೂ ಸ್ವಕೀಯವಾದ ಶಕ್ತಿಗೆ ಅನುಗುಣವಾದ ಕ್ರೋಧವನ್ನೂ ಪ್ರಕಟಿಸಬಲ್ಲವನೇ ಬಲ್ಲವನು)

'ತರಂಗ'ಕ್ಕೆ ಈ ಶಕ್ತಿ ಬಂದುದು ಹೀಗೆ—

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ।
ಕೆಲವಂ ಸಜ್ಜನಸಂಗದಿಂದಮಱಿಯಲ್ ಸರ್ವಜ್ಞನಪ್ಪಂ ನರಂ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ॥

ಸಂಕ್ರಾಂತಿಯ ಶುಭಾಶಯಗಳು. 1995 ನಿಮಗೆಲ್ಲ ಸುಖಕರವಾಗಲಿ.

● ಟಿ. ಮೋಹನದಾಸ ಪೈ
ವ್ಯವಸ್ಥಾಪಕ ಸಂಪಾದಕ

● ಸಂತೋಷಕುಮಾರ ಗುಲ್ವಾಡಿ
ಪ್ರಧಾನ ಸಂಪಾದಕ

ತರಂಗಾಂತರಂಗ

ಲಹರಿ

ಕಥೆಗಳು

ಮಿನಿಕಾದಂಬರಿ

ರಸಾಯನ

ಛಾಯಾನಗು

ವಿಶೇಷ ಲೇಖನಗಳು










ವಿಶೇಷ ಲೇಖನ

ಶಿವಾಜಿ ಸಾಹಸದ ಸಹ್ಯಾದ್ರಿ ಕೋಟೆಗಳು



ಚಿತ್ರ – ಲೇಖನ

● ಎನ್. ಸಿ. ದೇಸಾಯಿ

ವಿಳಾಸ: 'ಬಾಲಕೃಷ್ಣ',
82, ಸಿಲ್ವರ್ ಟೌನ್,
ಗೋಕುಲ್ ರಸ್ತೆ,
ಹುಬ್ಬಳ್ಳಿ – 580 030.

ಮಹಾರಾಷ್ಟ್ರದ ಸಹ್ಯಾದ್ರಿ ಪರ್ವತಶ್ರೇಣಿಯಲ್ಲಿರುವ ಛತ್ರಪತಿ ಶಿವಾಜಿಯ ಅಳಿದುಳಿದ ಕೋಟೆಗಳು ಇಂದಿಗೂ ಗತವೈಭವವನ್ನು ಸಾರುತ್ತವೆ. ಈ ಪಳೆಯುಳಿಕೆಗಳು ಶಿವಾಜಿಯ ರಾಜ್ಯಾಡಳಿತದ ಸಾಹಸದ ಕಥೆ ಹೇಳುತ್ತವೆ. ಭಾರೀ ಯುದ್ಧ-ಸೋಲು ಗೆಲುವು, ತಂತ್ರ-ಕುತಂತ್ರ, ವೈಭವ ಉತ್ಸವಗಳನ್ನು ಕಂಡ ಈ ತಾಣಗಳು ಇಂದು ಕೇವಲ ಐತಿಹಾಸಿಕ ಅವಶೇಷಗಳಲ್ಲ. ಪ್ರಮುಖ ಪ್ರೇಕ್ಷಣೀಯ ಸ್ಥಳಗಳೂ ಹೌದು. ಈ ಸಾಲು ಸಾಲು ಕೋಟೆಕೊತ್ತಳಗಳು ಉತ್ಸಾಹೀ ಸಾಹಸಿಗರಿಗೆ ಚಾರಣಕ್ಕೆ ಸ್ಫೂರ್ತಿ ನೀಡಿದರೆ ಇತಿಹಾಸತಜ್ಞರಿಗೆ, ಸಂಶೋಧಕರಿಗೆ ಇದೊಂದು ಶೋಧನೆಗೆ ಆಕರ. ಲೇಖಕ-ಕಲಾವಿದ ಎನ್. ಸಿ. ದೇಸಾಯಿಯವರು ಈ ಕೋಟೆ ಶ್ರೇಣಿಯನ್ನು ಕಂಡ ಬಗೆಯೇ ಬೇರೆ. ಬಣ್ಣ, ಕುಂಚ ಹಿಡಿದು ಕೋಟೆ ಸುತ್ತಿದ ದೇಸಾಯಿಯವರು 'ತರಂಗ'ಕ್ಕಾಗಿಯೇ ಬರೆದ ವಿಶೇಷ ಚಿತ್ರ, ಲೇಖನವಿದು.

ಇತಿಹಾಸವನ್ನು ನೆನಪಿಸಲು ಭಗ್ನಾವಸ್ಥೆಯಲ್ಲಿ ಉಳಿದಿರುವ ಅವಶೇಷಗಳೇ ನಾವು ಕೋಟೆ, ಕಿಲ್ಲೆ, ದುರ್ಗ ಮುಂತಾಗಿ ಕರೆಯುವ ಹಾಳುಬಿದ್ದ ಕಟ್ಟಡಗಳು. ಈ ಅವಶೇಷಗಳನ್ನು 'ನೆಲ ದುರ್ಗ', 'ಗಿರಿದುರ್ಗ', 'ಜಲದುರ್ಗ' ಹಾಗೂ 'ವನದುರ್ಗ'ವೆಂದು ವಿಂಗಡಿಸಲಾಗಿದೆ.

ಬ್ರಿಟಿಷರ ಸಾಮ್ರಾಜ್ಯ ಭಾರತದಲ್ಲಿ ತಳವೂರಿ ಬೆಳೆಯುತ್ತಿದ್ದಂತೆ, 19ನೆಯ ಶತಮಾನದ ಮೊದಲಿನ ಎರಡು ದಶಕಗಳ ವೇಳೆಗೆ ಎಲ್ಲೆಡೆಯ ಕೋಟೆ ಕೊತ್ತಳಗಳು, ದುರ್ಗಗಳು ನಿರುಪಯೋಗಿಯಾಗಿ ನಿರ್ಜನವಾಗಿ ಹಾಳುಬೀಳತೊಡಗಿದವು. ವೈಭವದಿಂದ ಮೆರೆದ, ಮಹತ್ವದ ಯುದ್ಧಗಳನ್ನು ಎದುರಿಸಿದ, ಬಲಾಢ್ಯರ ದಾಳಿಗೆ ತುತ್ತಾಗಿ ಮತ್ತೆ ಬದಲಾವಣೆ ಹೊಂದುತ್ತ ನಡೆದು ಬಂದ ಈ ಕೋಟೆಗಳು ಕತ್ತೆಗಳ ಆಶ್ರಯ ತಾಣವಾದವು. ಕಳ್ಳಕಾಕರು ಬಚ್ಚಿಕೊಂಡಿರುವ ನಿವಾಸಗಳಾದವು.

ಹಿಂದೂ ರಾಜ್ಯ ಸ್ಥಾಪನೆಗಾಗಿ ಬಹಳ ಹೆಣಗಾಡಿದ ಛತ್ರಪತಿ ಶಿವಾಜಿಯ ಕಾಲದಲ್ಲಿ ಈ ಕೋಟೆಗಳು ವಿಶೇಷ ಮಹತ್ವವನ್ನು ಪಡೆದಿದ್ದವು. ಶಿವಾಜಿಯ ಚಟುವಟಿಕೆಗಳ ಸ್ಥಾನವಾಗಿದ್ದ ಸಹ್ಯಾದ್ರಿಯ ಪರ್ವತ ಶ್ರೇಣಿಯ ಆಯಕಟ್ಟಿನ ಸ್ಥಳಗಳಲ್ಲಿ ಇಂದಿಗೂ ಕೋಟೆ-ಕೊತ್ತಳಗಳು ಉಳಿದಿವೆ. ಅಂತಹ ಕೆಲವು ಕೋಟೆಗಳನ್ನು ಓದುಗರಿಗೆ ಪರಿಚಯಿಸುವುದೇ ಈ ಲೇಖನದ ಉದ್ದೇಶ.

ಶಿವನೇರಿ ಕೋಟೆ

ಛತ್ರಪತಿ ಶಿವಾಜಿ ಜನಿಸಿದ ಶಿವನೇರಿ ಕೋಟೆ ಸಹ್ಯಾದ್ರಿ ಶ್ರೇಣಿಯಲ್ಲಿ ಪುಣೆ-ನಾಸಿಕ ಮಾರ್ಗದಲ್ಲಿ ನಾರಾಯಣ ಗಾಂವ್ ಎಂಬಲ್ಲಿಂದ 13 ಕಿಲೋ ಮೀಟರ್ ದೂರದಲ್ಲಿರುವ ಜುನ್ನರ್ ಶಹರದಿಂದ ಸುಮಾರು ಒಂದೂವರೆ ಕಿಲೋ ಮೀಟರ್ ದೂರದಲ್ಲಿದೆ.

ಶಿವನೇರಿ ಕೋಟೆ ನಿರ್ಮಾಣವಾದದ್ದು ಶಾತವಾಹನರ ಕಾಲದಲ್ಲಿ. ಕ್ರಿ.ಶ. 1170ರಿಂದ 1398ರ ವರೆಗೆ ಇದು ಯಾದವ ಮನೆತನಕ್ಕೆ ಸೇರಿತ್ತು. ಅನಂತರ ಶಿವನೇರಿಯವರ ಕೈಗೆ ಹೋಗಿ ಕ್ರಿ.ಶ. 1443ರಲ್ಲಿ ಬಹಮನಿ ಸರದಾರನಾಗಿದ್ದ ಮಲಿಕ್ ಉತ್ತುಜಾರ್ ಎಂಬವನ ಸ್ವಾಧೀನವಾಗಿ, ಆ ಬಳಿಕ ನಿಜಾಮಶಾಹಿ ಹಾಗೂ ಆದಿಲ್‌ಶಾಹಿ ದೊರೆಗಳಿಗೆ

ಶಿವಾಜಿ ಜನ್ಮಸ್ಥಳದ ಸ್ಮಾರಕ





ಶಿವನೇರಿಯಲ್ಲಿರುವ ಬಾಲಕ ಶಿವಾಜಿ ಮತ್ತು ತಾಯಿ ಜೀಜಾಬಾಯಿಯವರ ಪಂಚಲೋಹದ ಮೂರ್ತಿಯನ್ನು ಕಲಾವಿದ ಕಂಡಂತೆ

ಹಸ್ತಾಂತರವಾಗುತ್ತಾ ಬಂದಿತು.

1630ರಲ್ಲಿ ಆದಿಲ್‌ಶಾಹಿ ಆಡಳಿತದಲ್ಲಿ ವಿಜಯರಾವ್ ಸಿದ್ಧೋಜಿ ವಿಶ್ವಾಸರಾವ್ ಎಂಬಾತ ಶಿವನೇರಿ ಕೋಟೆಯ ಕಿಲ್ಲೇದಾರನಾಗಿದ್ದ. ಆ ದಿನಗಳು ಶಿವಾಜಿಯ ತಂದೆ ಶಹಾಜರಾವ್ ಬೋಸ್ಲೆಗೆ ಅತ್ಯಂತ ಕಷ್ಟದ ದಿನಗಳಾಗಿದ್ದವು. ಅವನ ಪತ್ನಿ ಗರ್ಭಿಣಿ ಬೇರೆ. ಅವನೇ ಜೀವಂತ ಉಳಿಯುವ ಭರವಸೆ ಇರಲಿಲ್ಲ. ಆಗ ತನ್ನ ಗರ್ಭಿಣಿ ಪತ್ನಿಯನ್ನು ಆತ ವಿಶ್ವಾಸರಾವ್‌ನ ರಕ್ಷಣೆಯಲ್ಲಿರಿಸಿದ. 1630ರ ಫೆಬ್ರವರಿ 19ರಂದು ಈ ಕೋಟೆಯಲ್ಲಿಯೇ ಶಿವಾಜಿಯ ಜನನವಾಯಿತು.

ಶಿವನೇರಿ ಕೋಟೆಯು ಒಂದೂವರೆ ಕಿ.ಮೀ. ನಷ್ಟು ಉದ್ದವಿದ್ದು ಇದರ ಪೂರ್ವದಲ್ಲಿ ನಾರಾಯಣಗಡ, ಉತ್ತರದಲ್ಲಿ ಹರಿಶ್ಚಂದ್ರಗಡ, ಪಶ್ಚಿಮದಲ್ಲಿ ಚಾವಂಡ ಹಡಸರ ಮತ್ತು ದಕ್ಷಿಣದಲ್ಲಿ ರಾಜಮಾಚಿ ಮುಂತಾದ ಕೋಟೆಗಳು ಇದನ್ನು ಸುತ್ತುವರಿದಿವೆ. ಶಿವನೇರಿ ಪರ್ವತ ಶ್ರೇಣಿಯಲ್ಲಿ ಚಿಕ್ಕ ದೊಡ್ಡ 150 ಗುಹೆಗಳಿವೆ. ಗುಹೆಗಳಲ್ಲಿ ಬ್ರಾಹ್ಮೀ ಲಿಪಿಯಲ್ಲಿರುವ ಶಿಲಾಶಾಸನಗಳಿವೆ. ಕಲ್ಯಾಣ ಭಡೋಚ ಮುಂತಾದ ಪ್ರಸಿದ್ಧ ಬಂದರುಗಳಲ್ಲಿ ನಡೆಯುತ್ತಿದ್ದ ವ್ಯಾಪಾರದ ಉಲ್ಲೇಖ ಈ ಶಿಲಾಶಾಸನಗಳಲ್ಲಿ ಕಂಡುಬರುತ್ತದೆ. ಶಿವನೇರಿಯು ಮಹಾಪುರುಷ ಶಿವಾಜಿಯ ಜನ್ಮಸ್ಥಳವಾದುದರಿಂದ ಇಂದಿಗೂ ಇದೊಂದು ಪುಣ್ಯಕ್ಷೇತ್ರವಾಗಿ ಪರಿಣಮಿಸಿದೆ.

ಕೋಟೆಯ ಒಳನೋಟ

ಪ್ರಾಚೀನ ಕಾಲದ, ಕಲ್ಲಲ್ಲಿ ಕೊರೆದ ಪಾವಟಿಗೆಗಳನ್ನು ತುಳಿದು ಕೋಟೆಯನ್ನು ಏರಬೇಕು.



ಏಳುಬಾಗಿಲ ಕೋಟೆಯ ಒಂದು ವೈಶಿಷ್ಟ್ಯಪೂರ್ಣ ದ್ವಾರ

ಕೋಟೆಯಲ್ಲಿ ಏಳು ದ್ವಾರಗಳಿವೆ. ಐದನೇ ದ್ವಾರವನ್ನು ದಾಟಿದೊಡನೆ ಬಲಬದಿಯ ತುದಿಯಲ್ಲಿರುವ ಮಾತಾ ಶಿವಾಯಿ ಮಂದಿರ ಎದುರಾಗುತ್ತದೆ. ಇನ್ನೆರಡು ದ್ವಾರಗಳನ್ನು ದಾಟಿ ಮುಂದೆ ಸಾಗಿದರೆ ಎಡಬದಿಯಲ್ಲಿ ಭವ್ಯವಾದ, ಆದರೆ ಭಗ್ನಾವಸ್ಥೆಯಲ್ಲಿರುವ ಒಂದು ಕಟ್ಟಡ ಕಾಣಿಸುತ್ತದೆ. ಅದೇ 'ಅಂಬರಖಾನಾ'. ಇದು ಒಂದು ಪ್ರಸಿದ್ಧ ಉಗ್ರಾಣವಾಗಿತ್ತು. ಇನ್ನು ತೀರ ಉತ್ತರದ ಕಡೆಗೆ ನಡೆದರೆ ಸಿಹಿನೀರಿನ 'ಗಂಗಾ ಜಮುನಾ' ಎಂಬ ಅವಳಿ ಬಾವಿಗಳು ಸಿಗುತ್ತವೆ. ಮತ್ತೂ ಮುಂದುವರಿದರೆ ಪ್ರಸಿದ್ಧ 'ನಿಮಜಗ' ಕಮಾನು ಎದುರಾಗುತ್ತದೆ. ಅಲ್ಲಿಂದ ಮುಂದೆ ಸಾಗಿದರೆ ಒಂದು ಚೌಕಾಕೃತಿಯ ಕಟ್ಟಡ ಕಾಣಿಸುತ್ತದೆ. ಅದೇ ಶಿವಾಜಿಯ ಜನ್ಮಸ್ಥಳದ ಸ್ಮಾರಕ.



ಶ್ರೀ ಕೇದಾರೇಶ್ವರ ಮಂದಿರ

ಪುರಂದರಗಡ

ಪೂನಾದಿಂದ ನೇರವಾಗಿ ಪುರಂದರಗಡಕ್ಕೆ ಹೋಗಲು ಸರಕಾರದ ಸಾರಿಗೆ ಬಸ್ಸುಗಳಿವೆ.

ದಕ್ಷಿಣೋತ್ತರವಾಗಿ ಹಬ್ಬಿರುವ ಸಹ್ಯಾದ್ರಿ ಪರ್ವತ ಶ್ರೇಣಿಯ ಮೂಲ ಪರ್ವತ ಸಾಲಿನಲ್ಲಿ ಇದರ ಉಪಪರ್ವತಗಳು ಅಲ್ಲಲ್ಲಿ ಟಿಸಿಲೊಡೆದಿವೆ. ಇಂತಹ ಒಂದು ಉಪಪರ್ವತದಲ್ಲಿ, ಪೂನಾದಿಂದ ದಕ್ಷಿಣ ದಿಕ್ಕಿಗೆ ಹೋಗುವ 'ಕಾತ್ರಕಘಾಟ್', 'ಬಾಬಾದೇವಘಾಟ್', 'ದಿವೇಘಾಟ್' ಎಂಬ ಘಾಟ್‌ಗಳನ್ನು ದಾಟಿ ಸಾಗಿದರೆ ಆಚೆ ಬದಿ ಪೂರ್ವದಿಕ್ಕಿನಲ್ಲಿ ಕಾಣುವ ಪರ್ವತ ಶಿಖರವೇ ಪುರಂದರಗಡ. ಪುರಂದರಗಡದ ದಕ್ಷಿಣ ದಿಕ್ಕಿನಲ್ಲಿ ನೀರಾ ಹಾಗೂ ಉತ್ತರ ದಿಕ್ಕಿನಲ್ಲಿ ಕಹರಾ ನದಿ ಹರಿಯುತ್ತದೆ. ಸಾಸವಾಡ ಎಂಬ ಇತಿಹಾಸ ಪ್ರಸಿದ್ಧ ಊರು ಈ ನದಿಯ ತೀರದಲ್ಲಿಯೇ ಇದೆ.

ಪುರಂದರಗಡ ಕೂಡ ರಾಷ್ಟ್ರಕೂಟರ, ಯಾದವರ ಕಾಲದ್ದೇ ಆಗಿದ್ದು ಕೋಟೆಯ ತಳದಲ್ಲಿ ಪೂರ್ವಕ್ಕೆ 'ಪೂರಾ' ಎಂಬ ಹಳ್ಳಿ ಇದೆ. ಅಲ್ಲಿ ಪೂರ್ವಾವಶೇಷ ಹಾಗೂ ನಾರಾಯಣೇಶ್ವರ ಎಂಬ ಎರಡು ಮಂದಿರಗಳಿವೆ. ಈ ಮಂದಿರಗಳು ಇದೇ ಅರಸು ಮನೆತನದವರ ಕೊಡುಗೆ.

ನಾರಾಯಣೇಶ್ವರ ಮಂದಿರವು ಭವ್ಯವೂ ಸುಂದರವೂ ಆಗಿರುವ ಒಂದು ಕಟ್ಟಡವಾಗಿದ್ದು ಇದು 'ಹೇಮಾಡಪಂಥಿ'ಗೆ ಸಂಬಂಧಿಸಿದ ವಾಸ್ತು ರಚನೆಯಾಗಿದೆ. ಇದರ ಪಶ್ಚಿಮಕ್ಕೆ ಹಾಳುಬಿದ್ದ ಸರೋವರದ ಅವಶೇಷಗಳಿವೆ. ಇಲ್ಲಿರುವ ಬಲ್ಲಾಳ ಮಂದಿರವು ಯಾದವರ ಕಾಲದ್ದೇ ಆಗಿದೆ.

ಬೀದರಿನ ಚಂದ್ರಹಾಸ ಪಂತ ದೇಶಪಾಂಡೆ ಎಂಬ ಶೂರನು ಬಹಮನಿ ರಾಜರ ಆಜ್ಞೆಯ ಮೇರೆಗೆ ಈ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಇದರ ಪುನರ್ನಿರ್ಮಾಣ ಕಾರ್ಯವನ್ನು ಕೈಗೊಂಡು ಬಹುಪ್ರಯಾಸದಿಂದ ಅದನ್ನು ಮುಗಿಸಿದ.

ನರಬಲಿ

ಆದರೆ ಇಲ್ಲಿರುವ 'ಶಂದರಿಯಾ' ಎಂಬ ಕಟ್ಟಡ ಮಾತ್ರ ಪೂರ್ಣವಾಗದೆ, ಕಟ್ಟುತ್ತಿದ್ದಂತೆಯೇ ಅದು ಬೀಳುತ್ತಿದ್ದ ವೈಚಿತ್ರ್ಯವನ್ನು ಕಂಡು ಅದು ನರಬಲಿ ಬೇಡುತ್ತಿರಬಹುದೆಂಬ ಶಂಕೆ ಮೂಡಿತು. ಆಗ ಬಹಿರನಾಕ ಸೋನನಾಕ ಎಂಬ ರಾಜ ಸೇವಕ ತನ್ನ ಮಗ ನಾಥನಾಕ ಮತ್ತು ಸೊಸೆ ದೇವಕಾಯಿಯನ್ನು ಬಲಿಕೊಡಲು ಸಿದ್ಧನಾದ. ಕಿಲ್ಲೇದಾರ ಹಾಗೂ ಆತನ ಸಹಾಯಕರು ನರಬಲಿ ನೀಡುವ ಅಸಹ್ಯ ಕೃತ್ಯವನ್ನು ಎಸಗಿಯೇ ಬಿಟ್ಟರು. ಈ ಬುರುಜಿನ ಪ್ರತಿಯೊಂದು ಕಲ್ಲು ಇಂದಿಗೂ ಆ ಎಳೆಯರ ನೋವಿನ ಕತೆಯನ್ನು ಸಾರುತ್ತ ನಿಂತಿದೆ.

ಕ್ರಿ.ಶ. 1558ರಲ್ಲಿ ನಿಜಾಮಶಾಹಿ ಕೊನೆಗೊಂಡು ಪುರಂದರಗಡ ಆದಿಲ್‌ಶಾಹಿಯವರ ವಶವಾಯಿತು. ಮಹಾದಾಜಿ ನೀಲಕಂಠನ ಮರಣಾನಂತರ ಕಿಲ್ಲೇದಾರರಾಗಲು ಪೈಪೋಟಿ ನಡೆದಾಗ, ಸಂದರ್ಭದ ಲಾಭ ಪಡೆದು ಶಿವರಾಜನು ಈ ಕೋಟೆಯನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡ. ಕ್ರಿ.ಶ. 1571ರಲ್ಲಿ ಆದಿಲ್‌ಶಾಹಿಯ ಸರದಾರನಾಗಿದ್ದ ಫತ್ಯಾಖಾನನು ಈ ಕೋಟೆಗೆ ದಂಡೆತ್ತಿ ಬಂದಾಗ ಶಿವಾಜಿರಾಜೆ ಹಾಗೂ ಅವನ ಶೂರ ಸೇನಾಧಿಪತಿಯಾಗಿದ್ದ ಮಾವಳೆ ಸೇರಿ ಖಾನನನ್ನು ಮುಂದೆ ಬರದಂತೆ ತಡೆದು ಸೋಲಿಸಿದರು. ಮುಂದೆ ಆರು ವರ್ಷಗಳ ಬಳಿಕ 1577ರಲ್ಲಿ ಶಿವಾಜಿಯು ನೇತಾಜಿ ಪಾಲಕರ್ ಎಂಬ ಸರದಾರನನ್ನು ಈ ಕಿಲ್ಲೆಯ ಮುಖ್ಯ ಅಧಿಪತಿಯಾಗಿ ನೇಮಿಸಿದ. ಶಿವಾಜಿಯ ಮಗ ಶಂಭಾಜಿ ಹುಟ್ಟಿದ್ದು ಇದೇ ಪುರಂದರ ಕೋಟೆಯಲ್ಲಿ.

ಶಿವಾಜಿಯ ಪರಾಭವ


ಈ ಕೋಟೆಯನ್ನು ಮರಳಿ ಪಡೆಯಬಯಸಿದ ಮೊಗಲ ಸರದಾರರಾದ ಜಯಸಿಂಗ್ ಮತ್ತು ದಿಲೇರಾಖಾನ್ ಜತೆಗೂಡಿ 1587ರಲ್ಲಿ ಪುರಂದರ ಗಡಕ್ಕೆ ಮುತ್ತಿಗೆ ಹಾಕಿದರು. ಪುರಂದರ ಕೋಟೆಯ ಉಪದುರ್ಗವಾದ ವಜ್ರಗಡ ಮೊಗಲರ ವಶವಾಯಿತು.

ಮುಂದೆ ಕಾಲು ಶತಮಾನ ಕಳೆದ ಮೇಲೆ ನೀರೋಪಂತ ಮುಜುಮ್‌ದಾರ್ ಎಂಬ ಸ್ವರಾಜ್ಯ ಪ್ರೇಮಿಯು ಕ್ರಿ.ಶ. 1611ರಲ್ಲಿ ಮೊಗಲರ ವಿರುದ್ಧ ಹೋರಾಡಿ ಈ ಕೋಟೆಯನ್ನು ಮರಳಿ ಪಡೆದನು. ಆದರೆ ಶಂಭಾಜಿಯ ಮರಣಾನಂತರ ಮತ್ತೊಮ್ಮೆ ಈ ಕೋಟೆ ಮೊಗಲರ ಕೈಸೇರಿತು. ಮೊಗಲರು ಕೋಟೆಯ ಹೆಸರನ್ನು ಬದಲಿಸಿ ಅದನ್ನು 'ಅಜಮ್‌ಗಡ' ಎಂದು ಕರೆದರು.

ಕೋಟೆಯನ್ನು ಕಳೆದುಕೊಂಡ ಅವಮಾನದಿಂದ ಕುದಿಯುತ್ತಿದ್ದ ಮರಾಠರು ಕೋಟೆಯನ್ನು ಮರಳಿ ಪಡೆಯಲು ಹೊಂಚು ಹಾಕುತ್ತಲೇ ಇದ್ದರು. 1626ರ ಸುಮಾರಿಗೆ ಶಂಕರಾಜಿ ನಾರಾಯಣ ಸಚೀವ ಎಂಬವನು ಮತ್ತೆ ಮೊಗಲರೊಡನೆ ಕಾದಾಡಿ ಕೋಟೆಯನ್ನು ಮರಳಿ ಪಡೆದನು. ಆದರೆ 1635ರಲ್ಲಿ ಛತ್ರಪತಿ ಶಾಹುಮಹಾರಾಜನು ಈ ಕೋಟೆಯನ್ನು ಪೇಶ್ವೆಯವರಿಗೆ ಬಿಟ್ಟುಕೊಟ್ಟ. ಮುಂದೆ ಬ್ರಿಟಿಷರು 1818ರಲ್ಲಿ ಮರಾಠಾರಾಜ್ಯವನ್ನು ಮಣ್ಣುಪಾಲು ಮಾಡಿ ಈ ಕೋಟೆಯನ್ನು ಕಬಳಿಸಿದರು. ಕೋಟೆಯನ್ನು ಸಾಕಷ್ಟು ಹಾಳುಗೆಡವಿದರು. ಮತ್ತು ಅಲ್ಲಿ ಒಂದು ಇಗರ್ಜಿಯನ್ನು ನಿರ್ಮಿಸಿದರು.

ಉತ್ತರದ ಕಡೆಯಿಂದ ಕೋಟೆಯನ್ನೇರಿದರೆ ನಾವು ಕಿಲ್ಲೆಯ ಪರಿಸರವನ್ನು ತಲಪುತ್ತೇವೆ. ಇಲ್ಲಿ ಹಲವಾರು ಚಿಕ್ಕ ದೊಡ್ಡ ಕೆರೆಗಳು, ಪುರಂದರೇಶ್ವರ, ರಾಮೇಶ್ವರ ಇತ್ಯಾದಿ ದೇವಮಂದಿರಗಳೂ ಇವೆ. ಕೋಟೆಯ ಅತ್ಯುನ್ನತ ಸ್ಥಳವನ್ನು ತಲಪಿದಾಗ ನಮಗೆ ಮೂರು ಗಿರಿಶಿಖರಗಳು ಕಾಣಸುತ್ತವೆ: ''ಖಾಂದಕಡಾ'', ''ರಾಜಗಾದಿ'' ಮತ್ತು ''ಕೇದಾರೇಶ್ವರ''. ಕೇದಾರೇಶ್ವರ ಮಂದಿರದ ಮುಂದೆ ನಿಂತು ಸುತ್ತ ಕಣ್ಣು ಹೊರಳಿಸಿದರೆ ಸಿಂಹಗಡ, ರಾಜಗಡ, ಪ್ರಚಂಡಗಡ, ವಿಚಿತ್ರಗಡಗಳ ಸುಂದರ ದೃಶ್ಯ ಗೋಚರಿಸುತ್ತದೆ.

ಈಗ ಪುರಂದರಗಡ ಒಂದು ಪ್ರಸಿದ್ಧ ಎನ್‌ಸಿಸಿ ಶೈಕ್ಷಣಿಕ ಕೇಂದ್ರವಾಗಿದೆ.



ಪ್ರತಾಪಗಡದ ರಮ್ಯ ನೋಟ

ಪ್ರತಾಪಗಡ

ಈ ಕೋಟೆಯ ನಿರ್ಮಾಣವಾದ ಅನಂತರ ಬಲಾಢ್ಯನೂ ಶ್ರೀಮಂತನೂ ಆದ ಶಿವಾಜಿಯನ್ನು ಕಂಡು ಕರುಬಿದ ಬಿಜಾಪುರದ ಆದಿಲ್‌ಶಾಹಿ ಇದನ್ನು ತನ್ನದಾಗಿ ಮಾಡಿಕೊಳ್ಳುವ ಸಂಚು ಹೂಡಿದ. ದಾಳಿಯ ನೇತೃತ್ವವಹಿಸಲು ಅತಿಬಲಶಾಲಿ ಹಾಗೂ ಕ್ರೂರಿ ಎಂದು ಪ್ರಸಿದ್ಧನಾದ ಅಫಜಲ್‌ಖಾನ್‌ನನ್ನು ನೇಮಿಸಿದ. ಅಫಜಲ್‌ಖಾನ್ ಕೋಟೆಯ ಮೇಲೆ ದಾಳಿ ನಡೆಸಿದ ಸುದ್ದಿ ತಿಳಿದಾಗ ಶಿವಾಜಿಯು ದುಡುಕುವುದು ತರವಲ್ಲವೆಂದೆಣಿಸಿ ಖಾನನನ್ನು ಸಂಧಾನಕ್ಕೆ ಕರೆದ. ಸಂಧಾನಕ್ಕೊಪ್ಪಿದ ಅಫಜಲ್‌ಖಾನ್ ಒಳಗೊಳಗೇ ಕುತಂತ್ರ ರೂಪಿಸಿದ. ಅವನು ಮತ್ತು ಶಿವಾಜಿ ಇಬ್ಬರೇ ಕೋಟೆಯ ಕೆಳಗೆ ದಟ್ಟ ಅರಣ್ಯದಲ್ಲಿ ಭೇಟಿಯಾಗುವುದೆಂದು ನಿಶ್ಚಯವಾಯಿತು.

ಖಾನನು ತನ್ನ 10,000 ಕುದುರೆ ಸವಾರ ಸೈನಿಕರನ್ನು ಸಮೀಪದ ಪೂರ ಎಂಬ ಹಳ್ಳಿಯಲ್ಲಿ ಇರಿಸಿದ. ಇದು ಇಬ್ಬರೂ ತಮ್ಮ ಜತೆ ಸೈನ್ಯ ತರಬಾರದೆಂಬ ಶರತ್ತಿನ ಉಲ್ಲಂಘನೆಯಾಗಿತ್ತು.

1657ರ ನವೆಂಬರ್ 10ನೆಯ ತಾರೀಕು ಗುರುವಾರ ಮಧ್ಯಾಹ್ನ ಎರಡು ಗಂಟೆಗೆ ಶಿವಾಜಿ ಮತ್ತು ಖಾನನ ಭೇಟಿ ನಡೆಯಿತು. ನಿಶ್ಚಿತ ಸ್ಥಳಕ್ಕೆ ಬಂದ ಖಾನ್ ನಗುನಗುತ್ತ ಮುಂದೆ ಬಂದು ಶಿವಾಜಿಯನ್ನು ಆಲಿಂಗಿಸುತ್ತಿದ್ದಂತೆಯೇ ತಾನು ಬಚ್ಚಿಟ್ಟುಕೊಂಡ ಆಯುಧದಿಂದ ಶಿವಾಜಿಯನ್ನು ಕೊಲ್ಲಲು ಪ್ರಯತ್ನಿಸಿದ.

ಪ್ರಸಂಗ ಬಂದರೆ ಇರಲಿ ಎಂದು ಸಿದ್ಧನಾಗಿಯೇ ಬಂದಿದ್ದ ಶಿವಾಜಿ ತನ್ನ ಬೆರಳುಗಳಿಗೆ ಹುಲಿಯುಗುರುಗಳನ್ನು ಹಾಕಿಕೊಂಡಿದ್ದ. ಖಾನ್ ತನಗೆ ಮೋಸ ಮಾಡುತ್ತಿದ್ದಾನೆಂದು ತಿಳಿಯುತ್ತಲೇ ಶಿವಾಜಿಯು ಹುಲಿಯುಗುರುಗಳಿಂದ ಖಾನನ ಹೊಟ್ಟೆಯನ್ನು ಸೀಳಿ ಕರುಳನ್ನು ಕಿತ್ತು ತೆಗೆದ. ಆ ಸ್ಥಿತಿಯಲ್ಲೂ ಓಡಲು ಪ್ರಯತ್ನಿಸಿದ ಖಾನನನ್ನು ಕಂಡ ಶಿವಾಜಿಯ ಅಂಗರಕ್ಷಕ ಸಂಭಾಜಿ ಕಾವಜಿ, ಖಾನನ ರುಂಡವನ್ನು ಹಾರಿಸಿದ. ಈ ಘಟನೆ ನಡೆಯುತ್ತಿದ್ದಂತೆಯೇ, ಸಮೀಪದಲ್ಲಿಯೇ ಅವಿತಿದ್ದ ಶಿವಾಜಿಯ ಸೈನ್ಯ 'ಹರಹರ ಮಹಾದೇವ' ಎಂದು ಗರ್ಜಿಸುತ್ತ ಆದಿಲ್‌ಶಾಹಿಯ ಸೈನಿಕರ ಮೇಲೆರಗಿ ಅವರನ್ನು ಓಡಿಸಿತು. ಈ ಘಟನೆ ನಡೆದದ್ದು ಪ್ರತಾಪಗಡ ಕೋಟೆಗೆ ಹೋಗುವ ದಾರಿಯಲ್ಲಿ. ಅಲ್ಲಿಯೇ ಅಫಜಲ್‌ಖಾನನ ಗೋರಿಯೂ ಇದೆ.

ಶಿವಾಜಿ ನಿರ್ಮಿತವಾದ ಈ ಕೋಟೆ ಈಗ ಸಾತಾರೆಯ ಛತ್ರಪತಿ ಮನೆತನದ ಖಾಸಗಿ ಆಸ್ತಿಯಾಗಿದೆ.

ಪ್ರತಾಪಗಡ ಕೋಟೆಗೆ ಹೋಗಲು ಪ್ರಸಿದ್ಧ ಗಿರಿಧಾಮವಾಗಿರುವ ಮಹಾಬಲೇಶ್ವರದಿಂದ ನೇರವಾದ ಬಸ್ಸಿನ ಸೌಕರ್ಯವಿದೆ. ಪ್ರತಾಪಗಡವನ್ನು ಕಾಲ್ನಡಿಗೆಯಿಂದ ಹತ್ತಲು ಅಸಮರ್ಥರಾದವರಿಗೆ ಅವರನ್ನು ಹೊತ್ತುಕೊಂಡು ಹೋಗಲು ಕುರ್ಚಿಯ ಸೇವಕರಿರುತ್ತಾರೆ. ಭಾರ ಹೊರುವ ನಾಲ್ಕು ಜನರು ಕುರ್ಚಿಯನ್ನು ಹೊತ್ತುಕೊಂಡು ಹೋಗುತ್ತಾರೆ.

ಸಿಂಧುದುರ್ಗ

ಇದೊಂದು ಜಲದುರ್ಗ ಹಾಗೂ ಶಿವಾಜಿಯಿಂದಲೇ ನಿರ್ಮಿಸಲ್ಪಟ್ಟ ಕೋಟೆ. ತನ್ನ ರಾಜಕೀಯ ಅನುಭವದ ಪರಿಣಾಮವಾಗಿ, ತನ್ನ ಸಾಮ್ರಾಜ್ಯದ ಪಶ್ಚಿಮದಡವನ್ನು ಇನ್ನಷ್ಟು ಬಲಪಡಿಸಲು ಜಲದುರ್ಗಗಳೇ ಯೋಗ್ಯವೆಂಬ ಶಿವಾಜಿಯ ತೀರ್ಮಾನದ ಫಲವೇ ಸಿಂಧುದುರ್ಗ. ಇದನ್ನು ಎಲ್ಲಿ ನಿರ್ಮಿಸಬೇಕೆಂದು ಯೋಚಿಸಿದಾಗ ಶಿವಾಜಿಗೆ ಹೊಳೆದದ್ದು ಪಶ್ಚಿಮ ಅಂಚಿನಲ್ಲಿ ಮಾಲವಣದ ಹತ್ತಿರವಿರುವ 'ಕುರಟೆ' ಎಂಬ ನಡುಗಡ್ಡೆ. ಮಾಲವಣ ಒಂದು ಬಂದರವೂ ಹೌದು.

ಕ್ರಿ.ಶ. 1664ರ ನವಂಬರ್ 10ರಂದು ಆರಂಭಗೊಂಡ ಕೋಟೆ ನಿರ್ಮಾಣಕ್ಕೆ ಮೂರು ವರ್ಷಕ್ಕೂ ಹೆಚ್ಚಿನ ಸಮಯ ಬೇಕಾಯಿತು. ಕೋಟೆಯ ಬುನಾದಿಯನ್ನು ನಿರ್ಮಿಸಲು ಸೀಸವನ್ನು ಕರಗಿಸಿ ಹೊಯ್ದು ಅದರಲ್ಲಿ ಕಲ್ಲು ಬಂಡಿಗೆಗಳನ್ನು ಹಾಕಲಾಯಿತು. ಇಲ್ಲವಾದಲ್ಲಿ ಆ ಸಮುದ್ರದ ಮಧ್ಯದಲ್ಲಿ ಪಾಯ ಹಾಕಲು ಸಾಧ್ಯವಾಗುತ್ತಿರಲಿಲ್ಲ. ಮೂರು ಸಾವಿರ ಆಳುಗಳು ದುಡಿದು ನಿರ್ಮಿಸಿದ ಈ ಕೋಟೆಯು



ಶಿವಾಜಿ ಮಹಾರಾಜನ ಪುತ್ಥಳಿ

ಆವಾರ ಸುಮಾರು 48 ಎಕ್ರೆಗಳಷ್ಟಿದೆ. ಕೋಟೆ ಗೋಡೆಯ ಒಟ್ಟು ಉದ್ದ ಸುಮಾರು ಮೂರು ಕಿ.ಮೀ. ಈ ಕೋಟೆ ಕೆಲವೆಡೆ ಎರಡು ಎತ್ತಿನ ಗಾಡಿಗಳು ಹೋಗುವಷ್ಟು ಅಗಲವಾಗಿದೆ. ಕೋಟೆಯು ಸುಮಾರು ಹತ್ತು ಮೀಟರ್ ಎತ್ತರವಿದ್ದು ಹಾವಿನಾಕಾರದಲ್ಲಿ ಅಂಕುಡೊಂಕಾಗಿದೆ. ಕೋಟೆಗೆ 52 ಬುರುಜುಗಳಿದ್ದು ಪ್ರತಿ 150 ಅಡಿಗಳಿಗೂ ಕೋಟೆಯ ಗೋಡೆ ಏರಲು ಪಾವಟಿಗೆಗಳನ್ನು ನಿರ್ಮಿಸಲಾಗಿದೆ.

ಈ ಕೋಟೆಯಲ್ಲಿ ಭವಾನಿ, ಜರೀಮರಿ, ಮಹಾಪುರುಷ, ಮಹಾದೇವ ಇತ್ಯಾದಿ ದೇವತೆಗಳ ಮಂದಿರಗಳೂ, ಮಹಾರಾಜರು ವಾಸಿಸುತ್ತಿದ್ದ ವಾಡೆ, ಅವುಗಳ ಪಕ್ಕದಲ್ಲಿ ಸಕ್ಕರೆ ಬಾವಿ, ಹಾಲಿನ ಬಾವಿ, ಮೊಸರಿನ ಬಾವಿ ಮುಂತಾದ ಬಾವಿಗಳೂ ಇವೆ.

ಮುಂಬಯಿಯಿಂದ ಸುಮಾರು 300 ಕಿ.ಮೀ. ದೂರದಲ್ಲಿರುವ ಮಾಲವಣಕ್ಕೆ ನೇರ ಬಸಿನ ಸೌಕರ್ಯವಿದೆ. ಪೂನಾದಿಂದಲೂ ನೇರ ಬಸ್ಸಿದೆ. ಚಿಕ್ಕ ಸಮುದ್ರಯಾನ ಮಾಡ ಬಯಸುವವರು ಯಾಂತ್ರಿಕ ದೋಣಿಯಲ್ಲಿಯೂ ಹೋಗಬಹುದು.

ಸಿಂಹಗಡ

''ಶಹನಾಮಾ-ಈ-ಹಿಂದ್'' (ಕ್ರಿ.ಶ. 1350) ಎಂಬ ಪಾರ್ಸಿ ಕಾವ್ಯದಲ್ಲಿ ಈ ಕೋಟೆಯನ್ನು 'ಕುಂಧಾನಾ' ಎಂದು ಉಲ್ಲೇಖಿಸಲಾಗಿದೆ. ಅದರಲ್ಲಿರುವ ಉಲ್ಲೇಖದ ಪ್ರಕಾರ ತುಘಲಕ್ ಮಹಮ್ಮದನು ಈ ಕೋಟೆಗೆ ಎಂಟು ತಿಂಗಳ ಕಾಲ ಮುತ್ತಿಗೆ ಹಾಕಿ, ಅಂದು ಕೋಟೆಯ ಕಿಲ್ಲೇದಾರನಾಗಿದ್ದ ನಾಗನಾಯಕನೆಂಬ ಕೋಳಿ ಸರದಾರನಿಂದ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡ. ಆಮೇಲೆ ಮೂರು ಶತಮಾನಗಳ ಅನಂತರ ಶಹಾಜಿರಾಜೆ ಭೋಸಲೆ ಎಂಬಾತನ ಅಸ್ಥಿರ ಆಡಳಿತದ ಬಳಿಕ ಕೋಟೆಯ ಸ್ವಾಮಿತ್ವ ಆದಿಲಶಾಹಿಗೆ ಹೋಗಿ ಮತ್ತೆ ಆತನ ಕೈಗೇ ಮರಳಿತು. ಆಗ ದಾದಾಜಿ ಕೊಂಡದೇವ, ಶಹಾಜಿರಾಜೆಯ ಸುಬೇದಾರನಾಗಿದ್ದ. 1647ರಲ್ಲಿ ದಾದಾಜಿ ನಿಧನಹೊಂದಿದ. ತರುವಾಯ ಶಿವಾಜಿಯು ಬಾಪೂಜಿ ಮುದಗಲ್ ದೇಶಪಾಂಡೆ ನರ್ಹೇಕರ್ ಎಂಬುವನ ಸಹಾಯದಿಂದ ಸಿಂಹಗಡದ ಮೇಲೆ ತನ್ನ ಸ್ವಾಮಿತ್ವವನ್ನು ಸ್ಥಾಪಿಸಿದ.

ರಾಜಾ ಜಯಸಿಂಗನೊಂದಿಗೆ ಆದ ಒಪ್ಪಂದದ ಪ್ರಕಾರ ಶಿವಾಜಿಯು ಈ ಕೋಟೆಯನ್ನು ಮೊಗಲರಿಗೆ ಒಪ್ಪಿಸಬೇಕಾದಾಗ, 1670ರ ಫೆಬ್ರವರಿ ನಾಲ್ಕರಂದು ನರವೀರನೆಂದು ಖ್ಯಾತನಾಗಿದ್ದ ತಾನಾಜಿಯು ಹುಲಿಯಂತೆ ಆರ್ಭಟಿಸುತ್ತ ಕಾದಾಡಿ ಈ ಕೋಟೆಯನ್ನು ಮತ್ತೆ ಸ್ವರಾಜ್ಯದೊಳಕ್ಕೆ ಸೇರಿಸಿಕೊಂಡ. ಆದರೆ ಬಳಿಕ ತಾನಾಜಿ ಈ ಮಹತ್ಕಾರ್ಯಕ್ಕಾಗಿ ತನ್ನ ಪ್ರಾಣವನ್ನೆ ಅರ್ಪಿಸಬೇಕಾಯಿತು. ಬಹುಶಃ ಆಗಲೇ ಇರಬೇಕು, ಶಿವಾಜಿಯು ''ಗಡ ಆಲಾ ಪಣ ಶಿಂಹ ಗೇಲಾ'' (ಕೋಟೆಯೇನೊ ಬಂತು ಆದರೆ ಸಿಂಹ ಹೋಯಿತು) ಎಂದು ಉದ್ಗರಿಸಿದ್ದು.



ಕಲ್ಯಾಣ ದರವಾಜ

ಕ್ರಿ.ಶ. 1703ರಲ್ಲಿ ಮತ್ತೆ ಈ ಕೋಟೆ ಮುಸ್ಲಿಮರ ವಶವಾದಾಗ ಔರಂಗಜೇಬನು ಕೋಟೆಯ ಹೆಸರನ್ನು 'ಭಕ್ಷಿ-ದಾ-ಭಕ್ಷ' ಎಂದು ಬದಲಿಸಿದ. 1818ರಲ್ಲಿ ಆಂಗ್ಲರು ಪ್ರಚಂಡ ತೋಪುಗಳನ್ನು ಬಳಸಿ ಯುದ್ಧ ಮಾಡಿ ಈ ಕೋಟೆಯನ್ನು ವಶಪಡಿಸಿಕೊಂಡು ಭಾರೀ ಪ್ರಮಾಣದ ಲೂಟಿ ಮಾಡಿದರು.

ಪೂನಾದಿಂದ ಕೇವಲ 23 ಕಿ.ಮೀ. ದೂರದಲ್ಲಿರುವ ಸಿಂಹಗಡಕ್ಕೆ ಹೋಗಲು ನೇರ ಬಸ್ ಸೌಕರ್ಯವಿದೆ.

ಪ್ರೇಕ್ಷಣೀಯ ಸ್ಥಳಗಳು

ಖಾಂದಕಡಾ ಕಿಲ್ಲೆ, 'ಕುದುರೆಬಾಗ' ಎಂದು ಕರೆಯಲ್ಪಡುವ ನೀರಿನ ಹೊಂಡ, ಗಣೇಶ ಹೊಂಡ, ರತ್ನಶಾಲೆಯ ಚೌಕು ಮತ್ತು ಮದ್ದಿನ ಮನೆ 'ದಾರೂಖಾನ'ವನ್ನು ನೋಡಿಕೊಂಡು ಮುಂದೆ ಹೋದರೆ ಒಂದು ಬಂಗಲೆ ಎದುರಾಗುತ್ತದೆ. ಇದೇ ತಿಲಕರ ಬಂಗಲೆ. ಈ ಕಟ್ಟಡದ ಒಂದು ಬದಿಯಲ್ಲಿ ಲೋಕಮಾನ್ಯ ತಿಲಕರ ಮೂರ್ತಿ

ಗಂಗಾಕೋಟೆ ಅಥವಾ ಅಂಬರಖಾನಾ



ಯೂ ಇದೆ. ''ಸ್ವರಾಜ್ಯ ನನ್ನ ಜೀವನದ ಹಕ್ಕು'' ಎಂದು ಘೋಷಿಸಿದ ತಿಲಕರು ಆಗಾಗ ಇಲ್ಲಿಗೆ ಬಂದು ವಾಸ್ತವ್ಯ ಮಾಡುತ್ತಿದ್ದರಂತೆ. ಸ್ವರಾಜ್ಯಕ್ಕಾಗಿ ಹೋರಾಡಿದ ಪುಣ್ಯಪುರುಷರು ತುಳಿದ ನೆಲ ಇದು.

ಭಾರತೀಯರ ಸಂಸ್ಕೃತಿಯನ್ನು ಸಾರುವ ಎಷ್ಟೋ ಶಿಲ್ಪಗಳನ್ನು ಮುಸ್ಲಿಮ್ ದೊರೆಗಳು ಧ್ವಂಸ ಮಾಡಿದ್ದಾರೆಂದು ಹೇಳುತ್ತೇವೆ. ಆದರೆ ಸಿಂಹಗಡದಲ್ಲಿ ಆಂಗ್ಲರ ತೋಪುಗಳಿಂದ ಆಗಿರುವ ಹಾನಿ ಅಷ್ಟಿಷ್ಟಲ್ಲ.

ಪನ್ಹಾಳಗಡ

ಪ್ರಾಚೀನ ಕಾಲದ ಪನ್ಹಾಳಗಡವನ್ನು ಯಾರು ಕಟ್ಟಿಸಿದರೆಂಬ ವಿಷಯದಲ್ಲಿ ಇತಿಹಾಸಕಾರರಲ್ಲಿಯೆ ಒಮ್ಮತವಿಲ್ಲ. ದಂತಿದುರ್ಗ ರಾಷ್ಟ್ರಕೂಟರಿಂದ ನಿರ್ಮಾಣವಾಯಿತೆಂದು ಕೆಲವರು ಹೇಳಿದರೆ, ಇನ್ನು ಕೆಲವರು ಭೋಜ ನಿಲಾಹರರು ಉಳಿದ ಕೋಟೆಗಳ ಜತೆ ಇದನ್ನು ನಿರ್ಮಿಸಿದರು ಎನ್ನುತ್ತಾರೆ. ಆದರೆ ಇಷ್ಟು ಮಾತ್ರ ನಿಜ: ತಳದಿಂದ ಬುರುಜಿನವರೆಗೂ ಇದರ ಪುನರ್ ನಿರ್ಮಾಣವನ್ನು ಭೋಜ ನಿಲಾಹರರೇ ಮಾಡಿದ್ದಾರೆ ಹಾಗೂ ಈ ಕೋಟೆ ಇವರ ಅನಂತರ ಯಾದವ, ಪಾಳೆಗಾರ, ಬಹಮನಿ, ಆದಿಲ್‌ಶಾಹಿ- ಹೀಗೆ ಅನೇಕ ರಾಜಶಾಹಿಗಳ ಪ್ರಭುತ್ವಕ್ಕೊಳಪಟ್ಟಿತ್ತು. ಕೋಟೆಯ ಮೇಲೆ ಆದಿಲ್‌ಶಾಹಿಯ ಕಾಲಕ್ಕೆ ನಿರ್ಮಾಣವಾದ ಕೆಲವು ಕಟ್ಟಡಗಳು ಇಂದಿಗೂ ಇವೆ. ಈ ಕೋಟೆಯ ಮೇಲೆ ವಿಶಿಷ್ಟ ಪ್ರೇಮವನ್ನು ಹೊಂದಿದ್ದ ಶಿವಾಜಿಯ ಕಾಲದಲ್ಲಷ್ಟೆ ಈ ಕೋಟೆ ಮರಾಠರ ಇತಿಹಾಸದಲ್ಲಿ ಪ್ರಸಿದ್ಧವಾಯಿತು.

ಪನ್ಹಾಳಗಡದ ಮೇಲೆ ಮೊದಲ ಬಾರಿಗೆ ಶಿವಾಜಿಯ ಪಾದಸ್ಪರ್ಶವಾದದ್ದು 1659ರ ನವೆಂಬರ್ 28ರಂದು. ಮತ್ತೆ ಶಿವಾಜಿಯು 1666ರ ಮಾರ್ಚ್ ಎರಡರಂದು ಇಲ್ಲಿಗೆ ಬಂದಾಗ ಆತ ಬಂದಿರುವ ಸುದ್ದಿ ತಿಳಿದು ಸಿದ್ಧಿ ಜೌಹರನು ಈ ಕೋಟೆಗೆ ಮುತ್ತಿಗೆ ಹಾಕಿದ. ಪರಿಣಾಮವಾಗಿ ಶಿವಾಜಿ ಇಲ್ಲಿ ಬಂಧಿಸಲ್ಪಟ್ಟ. ಬಳಿಕ ಶಿವಾಜಿಯು ಸಿದ್ಧಿಯನ್ನು ಒಪ್ಪಂದದ ಮಾತುಕತೆಯ ಸೋಗಿನಲ್ಲಿ ತೊಡಗಿಸಿ ಜುಲೈ 12ರಂದು ರಾಜದಿಂಡಿ ಮಾರ್ಗದಿಂದ ಕೋಟೆಯಿಂದ ಇಳಿಯುವ ಸಾಹಸ ಮಾಡಿದ. ಅಂದು ಆಷಾಢದ ಹುಣ್ಣಿಮೆಯ ದಿನ. ಮುಗಿಲನ್ನು ಕವಿದ ಕಪ್ಪು ಮೋಡಗಳು, ಸುರಿಯುತ್ತಿರುವ ಜಡಿಮಳೆ, ದಟ್ಟ ಅರಣ್ಯ, ಕಾಡುಪ್ರಾಣಿಗಳ ಓಡಾಟ. ಇಂಥ ಸನ್ನಿವೇಶವನ್ನೆದುರಿಸಿ ಪಾರಾಗಿ ಶಿವಾಜಿಯು ವಿಶಾಲಗಡ ತಲಪಿದ. ಆವೇಳೆ ಅವನ ಬಳಿ ಯಾವುದೇ ಸೈನ್ಯವಿರಲಿಲ್ಲ.

ಶಿವಾಜಿಯು ಸುರಕ್ಷಿತವಾಗಿ ಪಾರಾಗಬೇಕೆಂದು ಬಯಸಿದ ಶಿವಾಜಿಯ ಕೆಲವೇ ಕೆಲವು ಅಭಿಮಾನಿಗಳು ಒಂದು ನಾಟಕ ಮಾಡಿದರು. ಕಾಶೀನಾಥನೆಂಬವನು ಶಿವಾಜಿ ವೇಷಧಾರಿಯಾಗಿ ಪಲ್ಲಕ್ಕಿಯಲ್ಲಿ ಕುಳಿತ. ಶಿವಾಜಿಯು ಸಿಕ್ಕಿಬಿದ್ದನೆಂಬ ಸಂತೋಷದಿಂದ ಅವನ ಮೇಲೆ ಮುಗಿಬಿದ್ದ ಸಿದ್ಧಿ ಜೌಹರನು ಸತ್ಯ ವಿಷಯ ತಿಳಿದಾಗ ಕ್ರುದ್ಧನಾದ. ಶಿವಾಜಿಯನ್ನು ಹುಡುಕಿಯೇ ಬಿಡಬೇಕೆಂದು ಆರ್ಭಟಿಸಿದ. ಆಗ ಬಾಜಿಪ್ರಭು ದೇಶಪಾಂಡೆ ಎಂಬ ಶಿವಾಜಿಯ ಸರದಾರ ಸಿದ್ಧಿಯೊಂದಿಗೆ ಕಾದಾಡಿ ಕಾಲಹರಣ ಮಾಡುತ್ತಿರುವಂತೆಯೇ ಶಿವಾಜಿ ವಿಶಾಲಗಡವನ್ನು ತಲಪಿದ. ಮರುದಿನ ಗಜಾಪುರದ ಬಳಿ ಪಾವನಖಿಂಡಿಯಲ್ಲಿ ಬಾಜಿಪ್ರಭು ದೇಶಪಾಂಡೆ ವೀರಮರಣವನ್ನಪ್ಪಿದ. ಅಂದಿನಿಂದ 1673ರವರೆಗೆ ಪನ್ಹಾಳಗಡ ಬಿಜಾಪುರ ಆದಿಲ್‌ಶಾಹಿಯ ವಶದಲ್ಲಿತ್ತು. ಆ ವರ್ಷ ಕೊಂಡಾಜಿ, ಪರ್ಜದ, ಗಣಾಜಿ ಮೊದಲಾದ ವೀರರು ಕೇವಲ 60 ಮಂದಿ ಶೂರ ಸೈನಿಕರ ನೆರವಿನೊಂದಿಗೆ ಹೋರಾಡಿ ಪನ್ಹಾಳಗಡವನ್ನು ತಮ್ಮ ಕೈವಶ ಮಾಡಿಕೊಂಡರು.

ಈ ಕೋಟೆ ಒಂದು ಗಿರಿಧಾಮ. ಕೊಲ್ಹಾಪುರದಿಂದ ಹೊರಡುವ ಬಸ್ಸುಗಳು ನೇರ ತುದಿಯವರೆಗೂ ಹೋಗಿ ಕೋಟೆಯಲ್ಲಿ ನಿಲ್ಲುತ್ತವೆ. ಇಲ್ಲಿ ಸರಕಾರಿ ಹಾಗೂ ಖಾಸಗಿ ವಸತಿಗೃಹಗಳಿವೆ.

ಸಜ್ಜಾಕೋಟೆ, ಕಲಾವಂತಿನಿಯ ಸಜ್ಜಾ, ಗಂಗಾ ಸಿಂಧೂ ಜಮುನಾ ಎಂಬ ಕೋಟೆ, ತೀನದರವಾಜ, ವಾಘದರವಾಜ ಮತ್ತು ಹತ್ತಿರದಲ್ಲಿರುವ ಉದ್ಯಾನವಲ್ಲದೆ ಜಲಮಂದಿರ, ಸಾಂಬಾಜಿಯ ಸಮಾಧಿ ಮಂದಿರ, ಧರ್ಮಕೋಟೆ, ನಾಗಝರಿ ಮುಂತಾದವು ಇಲ್ಲಿ ನೋಡಬೇಕಾದ ಪ್ರೇಕ್ಷಣೀಯ ಸ್ಥಳಗಳು.

(ಶಿವತೀರ್ಥ) ರಾಯಗಡ

2500-3000 ವರ್ಷಗಳ ಹಿಂದೆ ರಾಯಗಡ ಕೋಟೆ ನಿರ್ಮಾಣವಾಗಿರಬಹುದು.

ಕ್ರಿ.ಶ. 1436ರಲ್ಲಿ ಬಹಮನಿ ಬಾದಶಹ ಎರಡನೇ ಅಲ್ಲಾವುದ್ದೀನನು ಈ ಕೋಟೆಯನ್ನು ಗೆದ್ದುಕೊಂಡ. ಬಳಿಕ 1656ರವರೆಗೆ ಇಲ್ಲಿ ನಿಜಾಮಶಾಹಿ, ಆದಿಲ್‌ಶಾಹಿ ಮುಂತಾದವರ ರಾಜ ಕಾರುಬಾರು ನಡೆಯಿತು.

ಸ್ವರಾಜ್ಯ ಸ್ಥಾಪನೆಯಲ್ಲಿ ತುಂಬ ಉತ್ಸಾಹದಿಂದ ಮುಂದೆ ಸಾಗಿದ್ದ ಶಿವಾಜಿಗೆ ರಾಯಗಡ ಎಲ್ಲ ದೃಷ್ಟಿಯಿಂದಲೂ ಉತ್ತಮವಾದ ಕೋಟೆ ಎಂದು ಮನವರಿಕೆಯಾಗಿತ್ತು. ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿರುವ ಕೋಟೆಗಳೆಂದರೆ ಶಿವಾಜಿಗೆ ಇನ್ನಿಲ್ಲದ ಪ್ರೇಮ. ಈ ಕೋಟೆಯನ್ನು ಕೈವಶ ಮಾಡಿಕೊಳ್ಳಲೇ ಬೇಕೆಂಬ ಅವನ ಹಂಬಲ 1656ರಲ್ಲಿ ಕೈಗೂಡಿತು. ಅವನು ತನ್ನ ಹೊಸ ರಾಜಧಾನಿಯನ್ನಾಗಿ ರಾಯಗಡವನ್ನು ಆರಿಸಿಕೊಂಡು ಅಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲು ಆಜ್ಞೆ ಮಾಡಿದ. ಕಟ್ಟಡ ನಿರ್ಮಾಣ ಖಾತೆಯ ಮುಖ್ಯಸ್ಥನಾಗಿದ್ದ ಹಿರೋಜಿ ಇಂದುಲ್ಕರ್ ಮೊದಲು ಅಲ್ಲಿದ್ದ ನಿರುಪಯೋಗಿ ಕಟ್ಟಡಗಳ ಬುರುಜುಗಳನ್ನು ಕೆಡವಿ ಹೊಸ ಕಟ್ಟಡಗಳನ್ನು ನಿರ್ಮಿಸಿದ.



ಶಿವಛತ್ರಪತಿಯ ಸಮಾಧಿ

1674ರ ಜೂನ್ ತಿಂಗಳಲ್ಲಿ ಶಿವಾಜಿಯ ಪಟ್ಟಾಭಿಷೇಕ ನಡೆದದ್ದು ಇದೇ ರಾಯಗಡ ಕೋಟೆಯಲ್ಲಿ. ದುರ್ದೈವದ ಸಂಗತಿ ಎಂದರೆ ಛತ್ರಪತಿ ಶಿವಾಜಿಯ ಮರಣ ಸಂಭವಿಸಿದ್ದು ಕೂಡ ಇದೇ ಕೋಟೆಯಲ್ಲಿ, 1680ರಲ್ಲಿ.

ಭಾರತದಲ್ಲಿ ತಳ ಊರುತ್ತಿದ್ದ ಆಂಗ್ಲರ ಕಣ್ಣು ಈ ಕೋಟೆಯ ಮೇಲೆ ಬಿತ್ತು. 1818ರ ಮೇ 10ರಂದು ಕರ್ನಲ್ ಪ್ರಾಥರ್ ಕೋಟೆಗೆ ಮುತ್ತಿಗೆ ಹಾಕಿ ಕೋಟೆಯನ್ನು ಗೆದ್ದುಕೊಂಡ. ಮುತ್ತಿಗೆಯ ವೇಳೆ ನಡೆದ ಹೋರಾಟದಲ್ಲಿ ಕೋಟೆಯ ಇಮಾರತುಗಳು ಬಹಳಷ್ಟು ಹಾನಿಗೊಳಗಾದವು.

ಶಿವಾಜಿಯ ಪ್ರೀತಿಯ ನಾಯಿಯ ಸಮಾಧಿ



ಪರಿಸರ

ಮಹಾರಾಷ್ಟ್ರದ ಕುಲಾಬಾ ಜಿಲ್ಲೆಯ ಬಂದರು ಪಟ್ಟಣವಾದ ಮಹಾಡ ತಾಲೂಕಿನಲ್ಲಿ ಈ ಕೋಟೆ ಇದೆ.

ಪ್ರತಿದಿನ ಬೆಳಗ್ಗೆ ಮುಂಬಯಿಯಿಂದ ರಾಯಗಡಕ್ಕೆ ಬಸ್ಸು ಹೊರಡುತ್ತದೆ. ಪೂನಾದಿಂದಲೂ ರಾಯಗಡಕ್ಕೆ ಬಸ್ಸುಗಳಿವೆ. ಮಹಾಡದಲ್ಲಿಳಿದು ಮುಂದೆ ಮಹಾಡ-ಪಾಚಾಡದ ಬಸ್ಸಿನಲ್ಲಿ ಪ್ರಯಾಣಿಸಿ ಪಾಚಾಡದಲ್ಲಿಳಿಯಬೇಕು. ಅಲ್ಲಿಂದ ಚಿತ್‌ದರವಾಜಕ್ಕೆ ಒಂದು ಮೈಲಿನಷ್ಟು ನಡೆದುಕೊಂಡು ಹೋಗಬೇಕು. ಚಿತ್‌ದರವಾಜದಲ್ಲಿಳಿದರೆ ಬಲಬದಿಯಲ್ಲಿ ಒಂದು ದಾರಿ ಕಾಣಿಸುತ್ತದೆ. ಅದೇ ನಿಮ್ಮನ್ನು ಕೋಟೆಯ ಮೇಲಕ್ಕೆ ಕರೆದೊಯ್ಯುವ ದಾರಿ.

ಚಿತ್‌ದರವಾಜ ನಿಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ. ಅದೆಂತಹ ಭವ್ಯತೆ! ಭದ್ರತೆ! ಇಬ್ಬದಿಯಲ್ಲಿರುವ ಶಿಲೆಯ ಬುರುಜುಗಳು! ಇವನ್ನೆಲ್ಲ ನೋಡುತ್ತಿರುವಂತೆಯೇ ಆ ದೃಶ್ಯ ಯಾರನ್ನೇ ಆದರೂ ಗತ ಇತಿಹಾಸಕ್ಕೆ ಎಳೆದೊಯ್ಯುತ್ತದೆ. ಮನಸ್ಸು ವಿಸ್ಮಯಗೊಳ್ಳುತ್ತದೆ.

ಇನ್ನೂ ನೂರು ಮೀಟರುಗಳಷ್ಟು ಮೇಲಕ್ಕೆ ಏರಿದಾಗ ಎಡತುದಿಯಲ್ಲಿ ಲೋಹ ಸ್ತಂಭ, ಮದರಾಶನ ಗೋರಿ ಮುಂತಾದವು ಕಾಣಿಸುತ್ತವೆ. ಮುಂದೆ ಹೋದಾಗ ಎಡಬದಿಯಲ್ಲಿ ತುಂಬಿದ ಗಂಗಾ ಸಾಗರ ಕೆರೆ. 'ಪಾಲಖಿ ದರವಾಜಾ' ಎಂಬ ದ್ವಾರದಿಂದ ಮುಂದೆ ಮೇಲೇರಿದರೆ ಬಲಬದಿಯಲ್ಲಿ ಸಾಲಾಗಿ ನಿಂತಿರುವ ಏಳು ಇಮಾರತ್‌ಗಳ ಅವಶೇಷಗಳು, 'ಮೇಣಾ' ದರವಾಜ, ಸುಮಾರು ಒಂದು ಮೈಲಿನಷ್ಟು ಮುಂದೆ ಹೋದರೆ 'ಹಿರಕಣಿ' ಬುರುಜ.

ಮೇಣಾ ದರವಾಜದಿಂದ ಹಿಂದಿರುಗಿದರೆ ಪ್ರಧಾನಮಂತ್ರಿಯ ವಾಡೆಯ ಅವಶೇಷ, ಕತ್ತಲು ಕೋಣೆಗಳು, ಇನ್ನಷ್ಟು ಮುಂದೆ ನಡೆದರೆ ಶಿವಾಜಿಯ ವಾಡೆ, ನಗಾರಖಾನೆ, ಸಿಂಹಾಸನ. ಈ ಆವರಣದ ಸುತ್ತ ನಡೆಯುತ್ತಿದ್ದಂತೆಯೆ ನಿಮ್ಮ ಮನಸ್ಸು ಗತಕಾಲಕ್ಕೆ ಮರಳುತ್ತದೆ: ಪೂರ್ಣ ರಾಜನ ಉಡುಪು ತೊಟ್ಟ ಛತ್ರಪತಿ ಶಿವಾಜಿ, ಅವನ ಮಂತ್ರಿಗಳು, ದರಬಾರು, ಸೈನಿಕರು, ಕುದುರೆಗಳು, ಶಿವಾಜಿಯ ಅತ್ಯಂತ ನಂಬಿಕೆಗೆ ಪಾತ್ರವಾಗಿದ್ದ 'ವಾಘ್ಯಾ' (ಹುಲಿ) ಎಂಬ ನಾಯಿ. ನಮ್ಮ ಕಣ್ಮುಂದಿರುವ ಅವಶೇಷಗಳೆಲ್ಲ ಅಲಂಕೃತವಾಗಿ ಸೇವಕರ ಚಟುವಟಿಕೆಗಳಿಂದ ತುಂಬಿದ ದೃಶ್ಯ ಕಣ್ಣೆದುರು ಬಂದು ನಮ್ಮನ್ನು ಕನಸಿನ ಲೋಕಕ್ಕೆ ಕರೆದೊಯ್ಯುತ್ತವೆ.

ನಗಾರಖಾನೆಯ ಬೃಹತ್ ಬಾಗಿಲಿನಿಂದ ಹೊರಬರುತ್ತಲೇ ಸುಮಾರು 30-40 ಕಿ.ಮೀ. ಅಂತರದಲ್ಲಿ ರಾಜಗಡ ಮತ್ತು ಪ್ರಚಂಡಗಡ ಕೋಟೆಗಳ ಮಸುಕು ದರ್ಶನವಾಗುತ್ತದೆ. ಎದುರು ಬಲಬದಿಯಲ್ಲಿ ಕುಶಾವರ್ತ ಕೆರೆ ಹಾಗೂ ಅಧಿಕಾರಿಗಳ ವಾಸಸ್ಥಾನಗಳ ಅವಶೇಷಗಳು. ಎಡಬದಿಗೆ ಹೊರಳಿದರೆ ಇಬ್ಬದಿಯಲ್ಲಿರುವ ಅಂಗಡಿಗಳ ಅವಶೇಷಗಳು. ಇಲ್ಲಿಂದ ಅರ್ಧ ಕಿ.ಮೀ. ದೂರದಲ್ಲಿ ಜಗದೀಶ್ವರನ ಮಂದಿರ. ಈ ಮಂದಿರದ ಎದುರೇ ಸಮರ್ಥ ರಾಮದಾಸರ ಆಶೀರ್ವಾದದಂತೆ, ಪರಕೀಯರು ಭಾರತದ ನೆಲದಲ್ಲಿರಬಾರದು ಎಂಬ ಉದ್ದೇಶದಿಂದಲೇ ಸ್ವರಾಜ್ಯ ಸ್ಥಾಪನೆಗೆ ಅಣಿಯಾಗಿದ್ದ ಶಿವಾಜಿಯ ಸಮಾಧಿ. ಅದರ ಬಳಿಯಲ್ಲೇ ಇನ್ನೊಂದು ಆಶ್ಚರ್ಯಕರ ದೃಶ್ಯ: ಒಂದು ಸಮಾಧಿ. ಅದರ ಮೇಲೊಂದು ನಾಯಿ. ಅದೇ 'ವಾಘ್ಯಾ' ಹೆಸರಿನ ನಾಯಿ ಸಮಾಧಿ.



ಸಿಂಧುದುರ್ಗದ ನೋಟ

ರಾಯಗಡ ಅತಿ ಎತ್ತರದ ಪ್ರದೇಶ. ಇದು ಸಮುದ್ರ ಪಾತಳಿಯಿಂದ 900 ಮೀಟರ್ ಎತ್ತರದಲ್ಲಿದೆ. ಆದ್ದರಿಂದ ಬೇಸಿಗೆಯಲ್ಲಿಯೂ ಇಲ್ಲಿ ಹವೆ ತಂಪಾಗಿರುತ್ತದೆ. ಆದರೆ ಈ ಕೋಟೆಯಲ್ಲಿ ಗಿರಿಧಾಮದ ಸೌಲಭ್ಯಗಳಿಲ್ಲ. ಪ್ರವಾಸಿಗಳು, ಜಿಲ್ಲಾ ಪರಿಷತ್ತಿನ ಧರ್ಮಶಾಲೆಯಲ್ಲಿ ಮುಂಚಿತವಾಗಿಯೇ ತಿಳಿಸಿ ಅಲ್ಲಿ ಉಳಿದುಕೊಳ್ಳಬಹುದು.



ಶಿವಾಜಿ ಮಹಾರಾಜನ ಪ್ರತಿಮೆ

* * *

ಚಿಕ್ಕಂದಿನಿಂದ ನನಗೆ ಕೋಟೆಕೊತ್ತಳಗಳೆಂದರೆ ಒಂದು ರೀತಿಯ ಅಭಿಮಾನ, ಆಕರ್ಷಣೆ. ಹಿಂದೆ ರಾಜಮಹಾರಾಜರು ಆಳಿದ, ಅನುಭವಿಸಿದ ಕತೆ ಹೇಳುವ ತಾಣಗಳು ಅವು. ಇನ್ನು, ಗಳಗನಾಥರ ಮರಾಠಿ ಅನುವಾದಿತ ಐತಿಹಾಸಿಕ ಕಾದಂಬರಿಗಳು ನನ್ನ ಚಿಕ್ಕ ವಯಸ್ಸಿನಲ್ಲೆ ನನ್ನ ಮೇಲೆ ತುಂಬ ಪರಿಣಾಮ ಬೀರಿದ್ದವು. ಸ್ವರಾಜ್ಯಕ್ಕಾಗಿ ರಾಜರುಗಳು ಹೋರಾಡಿದ ರೀತಿ, ರಾಜ್ಯಭಾರ ನಡೆಸುವಲ್ಲಿ ಶಿವಾಜಿಯ ಚತುರತೆ, ಅವನ ಯುದ್ಧ ಕೌಶಲ – ಇವೆಲ್ಲ ಅಚ್ಚಳಿಯದೆ ನನ್ನ ಮನಃಪಟಲದ ಮೇಲೆ ಉಳಿದದ್ದೆ ನನ್ನ ಈ ಲೇಖನಕ್ಕೆ ಪ್ರೇರಣೆಯಾಯಿತು.

ಭಾರತದಲ್ಲಿ ಆಯಾ ಪ್ರಾಂತಗಳಿಗೆ ತಕ್ಕಂತೆ, ಅಂದಿನ ಪರಿಸ್ಥಿತಿಗೆ ಸರಿಹೋಗುವಂತೆ ಹಾಗೂ ಸ್ಥಳೀಯವಾಗಿ ಸಿಗುವ ಕಟ್ಟಡ ನಿರ್ಮಾಣ ಸಾಮಗ್ರಿಗಳಿಗೆ ಯೋಗ್ಯವಾಗುವಂತೆ ಕೋಟೆಗಳು ನಿರ್ಮಾಣವಾಗಿವೆ. ಜಯಪುರ, ಉದಯಪುರ ಮುಂತಾದ ಕೋಟೆಗಳ ರೀತಿಯೇ ಬೇರೆ, ಮಹಾರಾಷ್ಟ್ರದ ಸಹ್ಯಾದ್ರಿಯ ಪರ್ವತ ಶ್ರೇಣಿಯಲ್ಲಿರುವ ಕೋಟೆಗಳ ರೀತಿಯೇ ಬೇರೆ. ಈ ಕೋಟೆಗಳು ಆಯಕಟ್ಟಿನ ಸ್ಥಳಗಳು, ಸ್ವರಾಜ್ಯ ಸ್ಥಾಪನೆಯ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ವಿಶಿಷ್ಟ ತಾಣಗಳು. ಅಂದು ಯುದ್ಧಗಳನ್ನು, ರಾಜಕೀಯ ಕುತಂತ್ರಗಳನ್ನು, ಉತ್ಸವ ವೈಭವಗಳನ್ನು ಕಂಡ ಈ ತಾಣಗಳು ಇಂದು ಐತಿಹಾಸಿಕ ಅವಶೇಷಗಳಾಗಿವೆಯಾದರೂ ಇವು ಚಾರಣಿಗರಿಗೆ ಸ್ಫೂರ್ತಿ ನೀಡುವ, ಅವರ ಉತ್ಸಾಹಕ್ಕೆ ಉತ್ತೇಜನ ನೀಡುವ ದುರ್ಗಮ ಗಿರಿದುರ್ಗಗಳು.

(ಈ ಲೇಖನಕ್ಕಾಗಿ ಕೆಲವು ಮರಾಠಿಗ್ರಂಥಗಳನ್ನು ಹಾಗೂ ಮಹಾರಾಷ್ಟ್ರ ಸರಕಾರದ ಪ್ರವಾಸೋದ್ಯಮ ಇಲಾಖೆಯ ಪುಸ್ತಿಕೆಗಳನ್ನು ಆಧಾರವಾಗಿ ಬಳಸಲಾಗಿದೆ.)

ಕಥೆ



ಹೃದಯ

ನಳಿಕೆಯ ಮೂಲಕ ಒಂದೊಂದಾಗಿ ಹನಿ ಬಾಟಲಿಯಿಂದ ಜಾರಿ ಕೈಗೆ ಚುಚ್ಚಿದ್ದ ಸೂಜಿಯ ಮೂಲಕ ನನ್ನ ದೇಹವನ್ನು ಪ್ರವೇಶಿಸುತ್ತಿದ್ದುದನ್ನು ಮಲಗಿಕೊಂಡೇ ಗಮನಿಸುತ್ತಿದ್ದೆ. ಒಂದೊಂದು ಹನಿ ತೊಟ್ಟಿಕ್ಕುತ್ತ ಬರುತ್ತಿದ್ದಂತೆ ನನ್ನ ಬದುಕಿನ ಸತ್ವಪರೀಕ್ಷೆಯ ಸಮಯ ಸಮೀಪಕ್ಕೆ ಬರುತ್ತಿದ್ದುದು ಸರಿಯುತ್ತಿದ್ದ ಸಮಯ ನೆನಪಿಗೆ ತಂದುಕೊಡುತ್ತಿತ್ತು. ನಾಳೆ ಬಹುಶಃ ಈ ವೇಳೆಗೆ ಆಪರೇಷನ್ ಮುಗಿದಿರುತ್ತದೆ. ನನಗೆ ಜ್ಞಾನ ಬಂದಿರಲೂಬಹುದು; ಅಥವಾ...? ಕಳೆದ ಒಂದು ವಾರದಿಂದ ಈ ಪ್ರಶ್ನೆಯ ತಾಕಲಾಟ ವಿಪರೀತವಾಗಿದೆ. ''ಈಗ ನೀವು ಏನನ್ನೂ ಮನಸ್ಸಿಗೆ ಹಚ್ಚಿಕೊಳ್ಳಬಾರದು'' ಎಂದು ವೈದ್ಯರೇನೋ ತಮ್ಮ ಮಾಮೂಲಿಯ ಕರ್ತವ್ಯದ ಮಾತನ್ನು ಆಗಾಗ ಆಡುತ್ತಿದ್ದರೂ ಈಗ ಹಚ್ಚಿಕೊಳ್ಳಲೇಬೇಕಾದ ಬಹಳಷ್ಟು ವಿಷಯಗಳು ಮನಸ್ಸನ್ನು ಮುತ್ತಲು ಪೈಪೋಟಿ ನಡೆಸುತ್ತಿದ್ದವು.

ಇಲ್ಲಿನ ಆಸ್ಪತ್ರೆಯ ಮಂಚದ ಸಂಗಾತಿಯಾಗಿ ಹತ್ತಿರ ಹತ್ತಿರ ತಿಂಗಳು ಸಮೀಪಿಸುತ್ತಿದೆ. ಈ ಅವಧಿಯಲ್ಲಿ ನಾನು ಯೋಚಿಸದ ವಿಚಾರವಿಲ್ಲ; ನೆನಪಿಸಿಕೊಳ್ಳದ ಸಂಗತಿಗಳಿಲ್ಲ; ಊಹಿಸಿಕೊಳ್ಳದ ಅನುಮಾನಗಳಿಲ್ಲ. ಬಹುಶಃ ಈ ಒಂದು ತಿಂಗಳು ನನ್ನ ಎಲ್ಲಾ ವಿಚಾರಗಳಿಗೆ ಸಮಯ ಒದಗಿಸಿಕೊಟ್ಟುದಷ್ಟೇ ಅಲ್ಲದೆ ಈ ಅವಧಿ ಬಿಟ್ಟರೆ ಹಿಂದೆಂದೂ ಬದುಕನ್ನು ಕುರಿತು ಸೀರಿಯಸ್ ಆಗಿ ಯೋಚಿಸಿದವನು ನಾನಲ್ಲ. ಆಗಾಗ ನನಗೇ ಹೇಳಿಕೊಳ್ಳುತ್ತೇನೆ–''ಸಾವಿನ ಕಲ್ಪನೆ ಬಂದರೆ ಸಾಕು; ಬದುಕಿನ ಬಗ್ಗೆ ಬಗೆಬಗೆಯ ವಿಚಾರಗಳು ಹೇಗೆ ಹುಟ್ಟುತ್ತವೆ! ಈ ಸಾವಿನ ನೆನಪು ಆಗಾಗ ಮನವನ್ನು ಗುದ್ದುತ್ತಿದ್ದರೇ ಬಹುಶಃ ಮನಸ್ಸನ್ನು ಸರಿಯಾದ ಹಾದಿಯಲ್ಲಿ ತಿದ್ದಲು ಸಾಧ್ಯವೇನೋ!'' ನಿಜ. ನಾನೀಗ ಒಂದರ್ಥದಲ್ಲಿ ವಿರಾಗಿಯಾಗಿದ್ದೇನೆ. ಬಂದಿದ್ದನ್ನು ಎದುರಿಸಲು ಮಾನಸಿಕ

ನನ್ನ ಒಂದು ಹೃದಯಕ್ಕೆ ಆದ ಗಾಯ ಅನೇಕ ಹೃದಯಗಳನ್ನು ಪರಿಚಯಿಸಿತು. ಒಂದೊಂದು ಹೃದಯಕ್ಕೆ ಒಂದೊಂದು ಕಥೆ!